ಸಾರ್ವಜನಿಕ ಶಿಕ್ಷಣ ಇಲಾಖೆ ಕರ್ನಾಟಕ ಸರ್ಕಾರ ಸರ್ವ ಶಿಕ್ಷಣ ಅಭಿಯಾನ

2010 ಡಿಸೆಂಬರ್ 1–15

# ಚಿಣ್ಣರ ಚೇತನ

ಓ ನನ್ನ ಚೇತನ ಆಗು ನೀ ಅನಿಕೇತನ

ದಕ್ಷತೆ, ಪ್ರಾಮಾಣಿಕತೆ, ಪರಿಶ್ರಮ, ನಿಸ್ವಾರ್ಥಸೇವೆ, ದೇಶಪ್ರೇಮದ ಮೂರ್ತರೂಪರಾದ ಮಹಾಮೇಧಾವಿ, ಕನ್ನಡಿಗ ಸರ್ ಎಂ ವಿಶ್ವೇಶ್ವರಯ್ಯನವರ ಸಾಧನೆ ಕುರಿತ ಈ ಸಂಚಿಕೆ ನಿಮ್ಮೊಳಗೆ ಅಂಥ ಸ್ಫೂರ್ತಿ ಹುಟ್ಟಿಸಲಿ. –ಸಂಪಾದಕರು

ಅಪ್ರತಿಮ ಇಂಜಿನಿಯರ್ ವಿಶ್ವೇಶ್ವರಯ್ಯನವರು ಜನಿಸಿ 150 ವರ್ಷಗಳಾಗಿವೆ. ಸೆಪ್ಟೆಂಬರ್ 15 ಅವರು ಹುಟ್ಟಿದ ದಿನ. ನಾಡನ್ನು ಕಟ್ಟಿ ಬೆಳೆಸಿದ, ಬೆಳಗಿಸಿದ ಈ ಮಹನೀಯರನ್ನು ನೆನೆಯಲು, ಅವರ ಬಗ್ಗೆ ಇನ್ನಷ್ಟು ಅರಿಯಲು ಇದಕ್ಕಿಂಥ ವಿಶೇಷ ಸಂದರ್ಭ ಬೇಕೆ? ಅದಕ್ಕೆಂದೇ ಈ ವಿಶೇಷ ಸಂಚಿಕೆ.



ಚಿತ್ರ: ಸಿ ಎಸ್ ಪ್ರಸಾದ್

## ವಿಶ್ವಬಂಧು ವಿಶ್ವೇಶ್ವರಯ್ಯ

“ನೂರು ವರ್ಷ ಬದುಕಿದವರ್‍ಯಾರು?
ಉಕ್ಕಿನ ಕಾರಖಾನೆ ತೆರೆದವರ್‍ಯಾರು?
ಜೋಗಿನ ಮಿಂಚು ಕಂಡವರ್‍ಯಾರು?
ಕೆಲಗೇರಿಯ ಕೆರೆ ಕಟ್ಟಿದವರ್‍ಯಾರು?
ವಿಶ್ವೇಶ್ವರಯ್ಯಾ–ವಿಶ್ವಬಂಧು!
ಬೆಳಸಿದರು ನಾಡು ಉದ್ಯೋಗ ತಂದು”

ಸರ್ ಎಂ. ವಿಶ್ವೇಶ್ವರಯ್ಯನವರ ಬಗ್ಗೆ ತಮ್ಮ ಪದ್ಯವೊಂದರಲ್ಲಿ ಕವಿ ದ.ರಾ.ಬೇಂದ್ರೆ ಹೀಗೆ ಹೇಳಿದ್ದಾರೆ. ಸರ್ ಎಂ.ವಿ. ನಮ್ಮ ನಾಡಿಗೆ ಕೊಟ್ಟ ಕೊಡುಗೆ ಏನು ಎಂದರೆ ಎಲ್ಲರಿಗೂ ನೆನಪಿಗೆ ಬರುವುದು ಮೈಸೂರಿನ ಕನ್ನಂಬಾಡಿ ಕಟ್ಟೆ ಅಥವಾ ಭದ್ರಾವತಿಯ ಕಬ್ಬಿಣ ಮತ್ತು ಉಕ್ಕಿನ ಕಾರ್ಖಾನೆ. ಆದರೆ ಅವರ ಸಾಧನೆಗಳು ಇಷ್ಟಕ್ಕೇ ಸೀಮಿತವಾಗಿರಲಿಲ್ಲ. ಸ್ಟೇಟ್ ಬ್ಯಾಂಕ್ ಆಫ್ ಮೈಸೂರು, ಕನ್ನಡ ಸಾಹಿತ್ಯ ಪರಿಷತ್ತು, ಮೈಸೂರು ವಿಶ್ವವಿದ್ಯಾನಿಲಯ, ಬೆಂಗಳೂರು ಮುದ್ರಣಾಲಯ, ಮೈಸೂರು ಸ್ಯಾಂಡಲ್ ಸೋಪ್ ಕಾರ್ಖಾನೆ, ಎಚ್‌ಎಎಲ್ ವಿಮಾನ ಕಾರ್ಖಾನೆ, ಹೆಬ್ಬಾಳದ ಕೃಷಿ ವಿಶ್ವವಿದ್ಯಾನಿಲಯ ಇವೆಲ್ಲವುಗಳ ಸ್ಥಾಪನೆಯ ಹಿಂದೆಯೂ ಸರ್ ಎಂ.ವಿ.ಯವರ ದೂರದೃಷ್ಟಿ ಇತ್ತು. ಈಗ ಯುವಿಸಿಇ ಎಂಬ ಹೆಸರಿನಿಂದ ಪ್ರಖ್ಯಾತವಾಗಿರುವ ಬೆಂಗಳೂರಿನ ಇಂಜಿನಿಯರಿಂಗ್ ಕಾಲೇಜು ಕೂಡ ಅವರದ್ದೇ ಕಲ್ಪನೆಯ ಕೂಸು. ಅಷ್ಟೇ ಏಕೆ, ಕಳೆದ ಶತಮಾನದ ಪ್ರಾರಂಭದಲ್ಲಿ ಬೆಂಗಳೂರು ನಗರದ ಕುಡಿಯುವ ನೀರು ಪೂರೈಕೆ ವ್ಯವಸ್ಥೆಯ ವಿನ್ಯಾಸ ಮಾಡಿದ್ದು ಕೂಡ ವಿಶ್ವೇಶ್ವರಯ್ಯನವರೇ.

ಇಂಥ ಅದ್ವಿತೀಯ ಮೇಧಾವಿ ನಮ್ಮವರು ಎಂಬುದು ಕನ್ನಡಿಗರೆಲ್ಲರಿಗೆ ಹೆಮ್ಮೆಯ ವಿಚಾರ. ಎಂಜಿನಿಯರ್ ಆಗಿ ಅಷ್ಟೇ ಅಲ್ಲ, ಆಡಳಿತಗಾರರಾಗಿಯೂ ಅವರು ತಮ್ಮ ಅನನ್ಯತೆಯನ್ನು ಮೆರೆದಿದ್ದಾರೆ. ನಮ್ಮ ದೇಶ ಸ್ವತಂತ್ರವಾದ ನಂತರದ ಇಷ್ಟು ವರ್ಷಗಳಲ್ಲಿ ನಮ್ಮ ರಾಜ್ಯ ಕರ್ನಾಟಕದಲ್ಲಿ ನಿರ್ಮಾಣ ಮಾಡಿದ ರೈಲು ಮಾರ್ಗಗಳಿಗಿಂತ ಹೆಚ್ಚು ಉದ್ದದ ರೈಲುಮಾರ್ಗಗಳನ್ನು ಸರ್ ಎಂ ವಿಶ್ವೇಶ್ವರಯ್ಯನವರು ತಾವು ಮೈಸೂರು ಸಂಸ್ಥೆಯ ದಿವಾನರಾಗಿದ್ದ ಕೇವಲ ಆರು ವರ್ಷಗಳ(1912–18) ಅವಧಿಯಲ್ಲಿ ನಿರ್ಮಿಸಿದ್ದರು!

**1** ಭಾರತ ಕಂಡ ಅಪ್ರತಿಮ ಇಂಜಿನಿಯರುಗಳಲ್ಲಿ ಸರ್ ಎಂ.ವಿ. ಅಗ್ರಗಣ್ಯರು. ಅವರು ಹುಟ್ಟಿದ್ದು 1860ರ ಸೆಪ್ಟೆಂಬರ್ 15ರಂದು. ಅವರ ಗೌರವಾರ್ಥ ಈ ದಿನವನ್ನು ಇಂಜಿನಿಯರುಗಳ ದಿನ ಎಂದು ಆಚರಿಸಲಾಗುತ್ತದೆ.

**2** ವಿಶ್ವೇಶ್ವರಯ್ಯನವರ ಬದುಕು ಎಲ್ಲರಿಗೂ ಎಲ್ಲ ಕಾಲದಲ್ಲೂ ಆದರ್ಶವಾಗಿ ನಿಲ್ಲುವಂಥದ್ದು. ಅವರ ಬದುಕಿನ ಬಗೆಗೆ ಕನ್ನಡದ ಹೆಸರಾಂತ ಬರಹಗಾರರಾದ ಮಾಸ್ತಿ ವೆಂಕಟೇಶ ಅಯ್ಯಂಗಾರರು ಹೇಳಿರುವುದು ಹೀಗೆ: “ನಮ್ಮ ಸಂಸ್ಥಾನದ ದಿವಾನರಾಗಿ ಅದರ ಹೊಸ ಜೀವನದ ಶಿಲ್ಪಿ ಎಂದು ಖ್ಯಾತಿ ಪಡೆದ ಶ್ರೀ ವಿಶ್ವೇಶ್ವರಯ್ಯನವರು, ದೇಶದ ಜೀವನ ಒಂದು ಯಂತ್ರದಂತೆ ಶಿಸ್ತು ತಪ್ಪದೆ ನಡೆಯಬೇಕೆಂದು ಬಯಸುತ್ತಿದ್ದರು. ದೇಶದ ಜೀವನದ ಹಾಗೆ ತಮ್ಮ ಸ್ವಂತ ಜೀವನವನ್ನೂ ಅವರು ಒಂದು ಯಂತ್ರ ಎಂಬಂತೆ ನಡೆಸಿದರು. ಇಂತಹ ಹೊತ್ತಿನಲ್ಲಿ ಇಂತಹ ಕೆಲಸ, ಒಂದೊಂದು ಕೆಲಸಕ್ಕೂ ಇಷ್ಟು ಹೊತ್ತು. ಯಾವ ಕೆಲಸವೂ ಇಷ್ಟು ಹೊತ್ತಿಗೆ ಆರಂಭ ಎಂದರೆ ಅಷ್ಟು ಹೊತ್ತಿಗೆ ಆರಂಭ ಆಗಬೇಕು, ಇಷ್ಟು ಹೊತ್ತಿಗೆ ಮುಗಿಯಬೇಕೆಂದರೆ ಅಷ್ಟು ಹೊತ್ತಿಗೆ ಮುಗಿಯಬೇಕು.” (‘ಅರ್ಚನ’, 1979)

**3** Memoirs of my working life –ಇದು ವಿಶ್ವೇಶ್ವರಯ್ಯನವರು ತಮ್ಮ ವೃತ್ತಿಜೀವನದ ಅನುಭವಗಳ ಬಗೆಗೆ ಬರೆದಿರುವ ಪುಸ್ತಕದ ಹೆಸರು. ಈ ಪುಸ್ತಕ ಎರಡು ಬಾರಿ ಕನ್ನಡಕ್ಕೆ ಅನುವಾದಗೊಂಡಿದೆ; ‘ನನ್ನ ಉದ್ಯೋಗ ಜೀವನದ ಚರಿತ್ರೆ’ (ಅನು: ಕಪಿನೀಪತಿ ಭಟ್ಟ) ಹಾಗೂ ‘ನನ್ನ ವೃತ್ತಿ ಜೀವನದ ನೆನಪುಗಳು’ (ಅನು: ಡಾ. ಗಜಾನನ ಶರ್ಮ) ಎಂಬ ಈ ಪುಸ್ತಕಗಳು ನಿಮಗೆ ದೊರೆತರೆ ತಪ್ಪದೇ ಓದಿ.

**4** ನಮ್ಮಲ್ಲಿ ಒಂದು ಮೋಟಾರು ವಾಹನ ತಯಾರಿಕಾ ಕಾರ್ಖಾನೆ ಇರಬೇಕು ಎಂದು ಆಶಿಸಿದ್ದ ಸರ್ ಎಂ.ವಿ., 1930ರ ದಶಕದಲ್ಲಿಯೇ ಈ ಕುರಿತು ಸಮಗ್ರ ಯೋಜನೆಯೊಂದನ್ನು ತಯಾರಿಸಿದ್ದರು. ಆದರೆ ಆಗಿನ ಬ್ರಿಟಿಷ್ ಸರಕಾರ ಅದಕ್ಕೆ ಅಡ್ಡಗಾಲು ಹಾಕಿತು.

## ಅವರ ಜೀವನದ ಪ್ರಮುಖ ಘಟನೆಗಳು

**1860**
ಚಿಕ್ಕಬಳ್ಳಾಪುರ ಜಿಲ್ಲೆಯ ಮುದ್ದೇನಹಳ್ಳಿಯಲ್ಲಿ ಜನನ

**1881**
ಪುಣೆಯಲ್ಲಿ ಇಂಜಿನಿಯರಿಂಗ್ ಅಧ್ಯಯನ ಆರಂಭ

**1884**
ಮುಂಬಯಿ ಪ್ರಾಂತದ ಲೋಕೋಪಯೋಗಿ ಇಲಾಖೆಯಲ್ಲಿ ಉದ್ಯೋಗ. 1902ರವರೆಗೆ ಸೇವೆ.

**1909**
ಮೈಸೂರು ಸಂಸ್ಥಾನದ ಮುಖ್ಯ ಇಂಜಿನಿಯರ್ ಹುದ್ದೆಯಲ್ಲಿ ಮೂರು ವರ್ಷಗಳ ಕಾಲ ಸೇವೆ

**1912**
ಮೈಸೂರು ಸಂಸ್ಥಾನದ ದಿವಾನರಾಗಿ ಆರು ವರ್ಷಗಳ ಕಾಲ ಸೇವೆ.

**1915**
ಬ್ರಿಟಿಷ್ ಆಡಳಿತದಿಂದ ನೈಟ್‌ಹುಡ್

**1923**



ಭದ್ರಾವತಿ ಕಬ್ಬಿಣ ಮತ್ತು ಉಕ್ಕಿನ ಕಾರ್ಖಾನೆಯ ಮುಖ್ಯಸ್ಥರಾಗಿ ಸೇವೆ

**1939**
ವಿಮಾನ ಕಾರ್ಖಾನೆಯ ನಿರ್ಮಾಣಕ್ಕಾಗಿ ಯೋಜನೆ

**1948**
ಮೈಸೂರು ವಿ.ವಿ.ಯಿಂದ ಡಾಕ್ಟರೇಟ್

**1951**
‘ನನ್ನ ವೃತ್ತಿಜೀವನದ ನೆನಪುಗಳು’ ಕೃತಿಯ ರಚನೆ

**1955**
ಭಾರತರತ್ನ ಪ್ರಶಸ್ತಿ

**1962**
ಬೆಂಗಳೂರಿನಲ್ಲಿ ನಿಧನ

# ಕೆಲವು ಪ್ರೇರಕ ಪ್ರಸಂಗಗಳು

## ಇಳಿಯದ ಹುರುಪು

ಸರ್ ಎಂ.ವಿ.ಯವರು 1946ರಲ್ಲಿ ಅಮೆರಿಕಾ ಪ್ರವಾಸ ಕೈಗೊಂಡಿದ್ದರು. ಅಲ್ಲಿ ಒಂದು ರಾಸಾಯನಿಕ ಕಾರ್ಖಾನೆಯನ್ನು ನೋಡಲು ಹೋಗಿದ್ದ ಸಂದರ್ಭ. ಕಾರ್ಖಾನೆಯ ನಾಲ್ಕನೇ ಅಂತಸ್ತಿನಲ್ಲಿದ್ದ ಯಂತ್ರವನ್ನು ನೋಡಬೇಕೆನ್ನಿಸಿತು, ಆದರೆ ಅಲ್ಲಿಗೆ ತಲುಪಲು ಇದ್ದ ಏಕೈಕ ಮಾರ್ಗ ಎಂದರೆ ಎಪ್ಪತ್ತೈದು ಅಡಿ ಎತ್ತರದ ಏಣಿ ಮಾತ್ರ. ಅದರ ಬದಿಗಳಿಗೆ ಹಿಡಿದುಕೊಳ್ಳಲು ಯಾವ ಆಧಾರವೂ ಇರಲಿಲ್ಲ. ಈಗೇನು ಮಾಡುವುದಪ್ಪ ಎಂದು ಅಲ್ಲಿದ್ದವರೆಲ್ಲ ನೋಡುತ್ತ ನಿಂತಿದ್ದರೆ ವಿಶ್ವೇಶ್ವರಯ್ಯನವರು ಮಾತ್ರ ಯಾವ ಯೋಚನೆಯನ್ನೂ ಮಾಡದೆ ಸರಸರನೆ ಆ ಏಣಿ ಹತ್ತಿ, ಯಂತ್ರವನ್ನು ನೋಡಿಕೊಂಡು ಇಳಿದು ಬಂದರಂತೆ. ಆಗ ಅವರಿಗೆ ಎಂಬತ್ತಾರು ವರ್ಷ ವಯಸ್ಸು!

## ತಣಿಯದ ದಾಹ

ಹೊಸ ಹೊಸ ವಿಷಯಗಳನ್ನು ತಿಳಿದುಕೊಳ್ಳುವುದರಲ್ಲಿ ವಿಶ್ವೇಶ್ವರಯ್ಯನವರಿಗೆ ಬಹಳ ಆಸಕ್ತಿ. ಒಮ್ಮೆ ಅವರನ್ನು ನೋಡಲು ಬಂದ ಮಿತ್ರರೊಬ್ಬರು ನಾನು ವಿದೇಶಕ್ಕೆ ಹೋಗುತ್ತಿದ್ದೇನೆ, ಅಲ್ಲಿಂದ ನಿಮಗೇನು ತಂದುಕೊಡಲಿ ಎಂದು ಕೇಳಿದರಂತೆ. ಆಗ ವಿಶ್ವೇಶ್ವರಯ್ಯನವರಿಗೆ ತೊಂಬತ್ತಕ್ಕಿಂತ ಹೆಚ್ಚು ವಯಸ್ಸಾಗಿತ್ತು. ಅವರು ಕೇಳಿದ ಉಡುಗೊರೆ ಏನು ಗೊತ್ತೆ? ‘ಅಲ್ಲಿಂದ ಹೊಸದೊಂದು ನಿಘಂಟು ತಂದುಕೊಡಿ, ಇಂಗ್ಲಿಷ್ ಭಾಷೆಗೆ ಯಾವ ಯಾವ ಹೊಸ ಪದಗಳು ಸೇರಿಕೊಂಡಿವೆ ತಿಳಿದುಕೊಳ್ಳಬೇಕು’ ಎಂದರಂತೆ ಅವರು. ತೊಂಬತ್ತು ವರ್ಷ ಮೀರಿದ್ದರೂ ಕಲಿಯುವ ಆಸಕ್ತಿ ಮಾತ್ರ ಅವರಲ್ಲಿ ಕೊಂಚವೂ ಕಡಿಮೆಯಾಗಿರಲಿಲ್ಲ!



“ಭಾರತದ ಅಭಿವೃದ್ಧಿಗೆ ಪ್ರಥಮ ಅಗತ್ಯಸೂತ್ರವೆಂದರೆ ಕಡ್ಡಾಯ ಶಿಕ್ಷಣ”
- ಸರ್ ಎಂ. ವಿ.

## ಕರಗದ ಶ್ರದ್ಧೆ

ಯಾವುದೇ ಕೆಲಸ ಮಾಡಿದರೂ ಅದಕ್ಕೆ ಸಂಪೂರ್ಣ ಸಿದ್ಧತೆ ಇರಬೇಕು ಎಂದು ನಂಬಿದ್ದವರು ಸರ್ ಎಂ.ವಿ. ಅವರು ಕೆಲಸದ ಮೇಲೆ ಆಗಿಂದಾಗ್ಗೆ ಬೇರೆ ಬೇರೆ ಪ್ರದೇಶಗಳಿಗೆ ಭೇಟಿನೀಡಿ ಅಲ್ಲಿನ ಸ್ಥಿತಿಗತಿಗಳನ್ನು ಪರಿಶೀಲಿಸಬೇಕಾಗುತ್ತಿತ್ತು.

ಇಂತಹ ಭೇಟಿಗಳ ಮೊದಲು ಅವರು ಆ ಪ್ರದೇಶದ ಎಲ್ಲ ವಿವರಗಳನ್ನೂ ತರಿಸಿಕೊಂಡು ತಮ್ಮ ಸಿದ್ಧತೆ ಮಾಡಿಕೊಳ್ಳುತ್ತಿದ್ದರು. ಹೀಗಾಗಿ ಅವರ ಭೇಟಿಯ ಸಂದರ್ಭದಲ್ಲಿ ಬೇಗಬೇಗ ನಿರ್ಧಾರಗಳನ್ನು ತೆಗೆದುಕೊಳ್ಳುವುದು ಹಾಗೂ ಅವುಗಳ ಅನುಷ್ಠಾನಕ್ಕೆ ಬೇಕಾದ ಕ್ರಮಗಳನ್ನು ಕೈಗೊಳ್ಳುವುದು ಸಾಧ್ಯವಾಗುತ್ತಿತ್ತು. ಹೀಗೆಯೇ ಒಂದು ಸಂದರ್ಭದಲ್ಲಿ ಸರ್ ಎಂ.ವಿ.ಯವರು ತಾವು ಓದಿದ ಶಾಲೆಗೆ ಭೇಟಿ ಕೊಟ್ಟಿದ್ದರು. ಅಲ್ಲಿ ಕುಶಲೋಪರಿ ವಿಚಾರಿಸಿ, ಮಕ್ಕಳಿಗೆ ಮಿಠಾಯಿ ಹಂಚಲೆಂದು ಸ್ವಲ್ಪ ಹಣ ಕೊಟ್ಟು ಹೊರಟಾಗ ಶಾಲೆಯ ಮಕ್ಕಳಿಗೆ ಕೆಲ ಹಿತನುಡಿಗಳನ್ನು ಹೇಳಿ ಎಂದು ಅವರನ್ನು ಕೇಳಿಕೊಳ್ಳಲಾಯಿತು. ಈಗ ಬೇಡ, ಇನ್ನೊಮ್ಮೆ ಬರುವೆ ಎಂದು ಹೇಳಿ ಹೊರಟ ವಿಶ್ವೇಶ್ವರಯ್ಯನವರು ಕೆಲವು ದಿನಗಳ ನಂತರ ಬಂದು ಶಾಲೆಯ ಮಕ್ಕಳನ್ನು ಉದ್ದೇಶಿಸಿ ಭಾಷಣ ಮಾಡಿದರು.

ಪುಟ್ಟ ಮಕ್ಕಳಿಗೆ ತಾನೆ ಭಾಷಣ ಮಾಡುವುದು, ಏನೋ ಒಂದು ಹೇಳಿಹೋದರಾಯಿತು ಎಂದುಕೊಳ್ಳದೆ ಅದಕ್ಕೂ ತಯಾರಿ ಬೇಕು ಎಂದುಕೊಂಡಿದ್ದು ವಿಶ್ವೇಶ್ವರಯ್ಯನವರಿಗೆ ಕೆಲಸದ ಕುರಿತು ಇದ್ದ ಶ್ರದ್ಧೆಯನ್ನು ತೋರಿಸುತ್ತದೆ.




ವಿಶ್ವೇಶ್ವರಯ್ಯ ಕೈಗಾರಿಕಾ ಮತ್ತು ತಾಂತ್ರಿಕ ವಸ್ತುಸಂಗ್ರಹಾಲಯ, ಭಾರತದ ಅತ್ಯುತ್ತಮ ವಸ್ತುಸಂಗ್ರಹಾಲಯಗಳಲ್ಲಿ ಒಂದು. ಬೆಂಗಳೂರಿನ ಕಸ್ತೂರಬಾ ರಸ್ತೆಯಲ್ಲಿ ಕಬ್ಬನ್ ಉದ್ಯಾನವನಕ್ಕೆ ಹೊಂದಿಕೊಂಡಂತೆಯೇ ಇರುವ ಈ ಸಂಗ್ರಹಾಲಯವನ್ನು ವಿಶ್ವೇಶ್ವರಯ್ಯರವರ ಜನ್ಮ ಶತಾಬ್ದಿ ಆಚರಣೆಯ ಅಂಗವಾಗಿ 1962ನೇ ಇಸವಿಯಲ್ಲಿ ಸ್ಥಾಪಿಸಲಾಯಿತು. ವಿಜ್ಞಾನ–ತಂತ್ರಜ್ಞಾನಕ್ಕೆ ಸಂಬಂಧಪಟ್ಟ ನೂರಾರು ವಿಷಯಗಳನ್ನು ನೀವೇ ಸ್ವತಃ ಪ್ರಯೋಗ ಮಾಡಿ ತಿಳಿದುಕೊಳ್ಳುವ ಸೌಲಭ್ಯ ಒದಗಿಸುವ ಅಪರೂಪದ ಸಂಗ್ರಹಾಲಯ ಇದು. ಮುಂದಿನ ಬಾರಿ ಬೆಂಗಳೂರಿಗೆ ಬಂದಾಗ ಅಲ್ಲಿಗೆ ಭೇಟಿಕೊಡಲು ಮರೆಯಬೇಡಿ

ಈ ಸಂಚಿಕೆ ಓದಿ ನಿಮಗೆ ಏನೆನ್ನಿಸಿತು? ಯಾವುದು ಇಷ್ಟವಾಯಿತು, ಯಾವುದು ಇಷ್ಟವಾಗಲಿಲ್ಲ? ಪತ್ರ ಬರೆದು ನಮಗೆ ತಿಳಿಸಿ. ವಿಳಾಸ ಇಲ್ಲಿದೆ.

ಅದಮ್ಯ ಚೇತನ
‘ಅನ್ನಪೂರ್ಣ’
ಮಹಾನಗರಪಾಲಿಕೆ ಸಮುದಾಯ ಭವನ
ಗವಿಪುರ, ಬೆಂಗಳೂರು –19

ಸರ್ವ ಶಿಕ್ಷಣ ಅಭಿಯಾನ
ಎಲ್ಲರೂ ಕಲಿಯೋಣ–ಎಲ್ಲರೂ ಬೆಳೆಯೋಣ

ಅದಮ್ಯ ಚೇತನ ಬೆಂಗಳೂರು

ಚಿಣ್ಣರ ಚೇತನ–ಶಾಲಾ ಮಕ್ಕಳ ಗೋಡೆ ಪತ್ರಿಕೆ. ಕರ್ನಾಟಕ ಸರ್ಕಾರ, ಸರ್ವಶಿಕ್ಷಣ ಅಭಿಯಾನ ಮತ್ತು ಅದಮ್ಯ ಚೇತನ ಸಂಸ್ಥೆ– ಇವರ ಸಹಭಾಗಿತ್ವದಲ್ಲಿ ಪ್ರಕಾಶಿಸಿದೆ.
© ಹಕ್ಕುಗಳನ್ನು ಕಾದಿರಿಸಲಾಗಿದೆ

ಸರ್ವ ಶಿಕ್ಷಣ ಅಭಿಯಾನ ಮಿಷನ್
ಬೆಂಗಳೂರು